ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1ನೇ ಮಹಡಿಯ ಕಾಮಗಾರಿ ಕೆಲಸ ಮೇಲ್ಛಾವಣಿಯ ಮಟ್ಟಕ್ಕೆ ಬಂದಿದೆ.

ಆ) 1) ಸರ್ಕಾರದ ವತಿಯಿಂದ - ರೂ. 5.00

2) ಇತರೆ ಮೂಲಗಳಿಂದ ಸ್ಥಳೀಯವಾಗಿ - ರೂ. 52.05

ಒಟ್ಟು - ರೂ. 57.05 ಲಕ್ಷ

ಇ) ರೂ. 38.00 ಲಕ್ಷ ಹಣ ಖರ್ಚಾಗಿರುತ್ತದೆ

ಈ) ಕೆಲವು ನ್ಯೂನತೆಗಳಿಂದ ಕಾಮಗಾರಿ ಕೆಲಸ ಸ್ಥಗಿತಗೊಂಡಿತ್ತು. ನ್ಯೂನತೆಗಳನ್ನು ಸರಿಪಡಿಸಿಲು ಪ್ರೊಫೆಸರ್. ಆರ್. ಜಗದೀಶ್, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಇವರ ನೇತೃತ್ವದಲ್ಲಿ ನೇಮಿಸಲಾಗಿದ್ದ ತಾಂತ್ರಿಕ ಸಮಿತಿ ವರದಿಯ ಅನುಸಾರ ನ್ಯೂನತೆ ಸರಿಪಡಿಸುವ ಹಾಗೂ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಿದ್ದು ಕೆಲಸ ಪ್ರಗತಿಯಲ್ಲಿದೆ. ನ್ಯೂನತೆಯ ದುರಸ್ತಿ ಹಾಗೂ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಿವಮೊಗ್ಗ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರ ತೆರೆಯುವುದು

588(386) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿನ ಜಾನುವಾರು ಸಂಖ್ಯೆಗಳಿಗನುಗುಣವಾಗಿ ಪಶು ಚಿಕಿತ್ಸಾಲಯಗಳನ್ನು ಒದಗಿಸಲಾಗಿದೆಯೇ:- ಶಿವಮೊಗ್ಗ ನಗರದ ವಿನೋಬನಗರ, ಗೋಪಾಳ, ಕಾಶೀಪುರ, ವಿದ್ಯಾನಗರ, ಮಿಳಘಟ್ಟಿ ಇಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಮಂಜೂರಾತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ವಿವರ ತಿಳಿಸುವುದು.

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ವರ್ಷ ಪಶು ಚಿಕಿತ್ಸೆಗಾಗಿ ಔಷಧಿಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ; ವಿವರ ತಿಳಿಸುವುದು.

ಇ) ಸರ್ಕಾರದ ಕುಕ್ಕುಟ ಮಂಡಳಿ ವತಿಯಿಂದ ಶಿವಮೊಗ್ಗ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಕೋಳಿ ಸಾಕಾಣಿಕೆಗೆ ಎಷ್ಟು ಫಲಾನುಭವಿಗಳಿಗೆ ಸಹಾಯಧನ ಮಂಜೂರು ಮಾಡಲಾಗಿದೆ. ಮಂಜೂರು ಮಾಡಿದ ಹಣ ಎಷ್ಟು? (ವಿವರ ತಿಳಿಸುವುದು)

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಹೌದು, ಪ್ರಸ್ತುತ ಹೊಸ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಅ) ರೂ. 2.77 ಲಕ್ಷಗಳು

ಇ) ಇಲ್ಲ

ಮಾಗಡಿ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನದ ನಿರ್ಮಾಣ

589(814) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಅಂಬೇಡ್ಕರ್ ಭವನ ನಿರ್ಮಾಣದ ಪ್ರಗತಿ ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿ ವಿಳಂಬವಾಗುತ್ತಿರಲು ಕಾರಣಗಳೇನು?

ಇ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಮಾಗಡಿ ತಾಲ್ಲೂಕಿಗೆ 2 ಮಿನಿ ಅಂಬೇಡ್ಕರ್ ಭವನಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ:

1. ಮಾಗಡಿ ಟೌನ್
2. ಸೋಲೂರು

ಮಾಗಡಿ ಟೌನ್‌ನಲ್ಲಿ ಅಂಬೇಡ್ಕರ್ ಭವನ ನಿರ್ಮಾಣದ ಕಾರ್ಯವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ಸೋಲೂರು ಗ್ರಾಮದಲ್ಲಿ ಮಂಜೂರಾದ ಅಂಬೇಡ್ಕರ್ ಭವನದ ಮೇಲ್ಛಾವಣಿ ಕಾಮಗಾರಿ ಮುಗಿದಿದ್ದು, ಫ್ಲೋರಿಂಗ್ ಕೆಲಸ ಪ್ರಗತಿಯಲ್ಲಿದೆ.

ಆ) ಅಂಬೇಡ್ಕರ್ ಭವನಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ 5.00 ಲಕ್ಷ ರೂ.ಗಳ ಅನುದಾನವನ್ನು ಮಾತ್ರ ಕೊಡಲಾಗುತ್ತಿದ್ದು ಉಳಿದ ಮೊತ್ತವನ್ನು ಸ್ಥಳೀಯ ಮೂಲಗಳಿಂದ ಕ್ರೋಢಿಕರಿಸಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಭವನದ ನಿರ್ಮಾಣ ಮಾಡಬೇಕಾಗಿರುವುದರಿಂದ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಬೇಕಾಗಿರುವ ಮೊತ್ತವನ್ನು ಕ್ರೋಢೀಕರಿಸಿ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುವುದರಿಂದ ವಿಳಂಬವಾಗಿರುತ್ತದೆ.

ಇ) ಮಾಗಡಿ ಟೌನ್‌ನ ಅಂಬೇಡ್ಕರ್ ಭವನದ ಕಾಮಗಾರಿಯನ್ನು ಹೆಚ್ಚುವರಿ ಮೊತ್ತವನ್ನು ಕ್ರೋಢೀಕರಿಸಿಕೊಂಡ ನಂತರ ಪ್ರಾರಂಭಿಸಲಾಗುವುದು. ಸೋಲೂರು ಗ್ರಾಮದಲ್ಲಿನ ಅಂಬೇಡ್ಕರ್ ಭವನದ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.